**<u>ಸಾಕ್ಷಿಯನ್ನು ದಿನಾಂಕ 22.04.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಬಿ ಆರ್ ಎಸ್ ವಕೀಲರಿಂದಃ</u>**

ನಿಪಿ1 ದಾಖಲಾತಿಯನ್ನು ನಾನೇ ಟೈಪ್ ಮಾಡಿದ್ದೇನೆ. ನಾನು ಸಹಿಯನ್ನು ಕೊನೆಯ ಪುಟದಲ್ಲಿ ಸಬ್ ರಿಜಿಸ್ಟರ್ ಕಛೇರಿಯಲ್ಲಿ ಹಾಕಿದ್ದೇನೆ. ಸಬ್ ರಿಜಿಸ್ಟರ್ ಕಛೇರಿಯಲ್ಲಿ ನಾನು ಹಾಜರಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸಾಕ್ಷಿಯು ನಿಪಿ1 ದಾಖಲಾತಿಯಲ್ಲಿ ನಾನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸಹಿ ಮಾಡಿದ್ದು, ಅದೇ ದಾಖಲೆಯಾಗಿದೆ ಎಂದು ನುಡಿಯುತ್ತಾರೆ. ನಾನು ಎಲ್ಲಾ ಸಹಿಗಳನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಮಾಡಿದ್ದೇನೆ.

ನಮ್ಮ ಕಚೇರಿಗೆ ಎಲ್ಲಾ ಸಾಕ್ಷಿದಾರರು ಮತ್ತು ಪಕ್ಷಕಾರರು ಬಂದಿದ್ದರು. ಆದರೆ ನಮ್ಮ ಕಚೇರಿಯಲ್ಲಿ ಸಹಿ ಮಾಡಿರುವುದಿಲ್ಲ. ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸಹಿ ಮಾಡಿರುತ್ತಾರೆ. ದಾಖಲಾತಿಯಲ್ಲಿ ಎಲ್ಲವನ್ನು ಪರಿಶೀಲನೆ ಮಾಡಿದ ನಂತರ ನೋಂದಣಿ ಮಾಡಿಸಿಕೊಳ್ಳವ ಸಲುವಾಗಿ ನಂಬರ ನೀಡಲಾಗುತ್ತದೆ ಎಂದರೆ ಸರಿ. ಸಬ್ ರಿಜಿಸ್ಟರ್ ಕಛೇರಿಯಲ್ಲಿ ಪೇಮೆಂಟ್ ಮಾಡಿದ್ದಲ್ಲಿ ಅದನ್ನು ಸಹ ದಾಖಲಾತಿಯಲ್ಲಿ ಸಬ್ ರಿಜಿಸ್ಟರ್ ರವರು ನನ್ನ ಮುಂದೆ ಹಣ ಪಾವತಿಯಾಗಿದೆ ಎಂದು ಬರೆಯುತ್ತಾರೆ ಎಂದರೆ ಸರಿ. ನಾನು ಆ ದಿನ ಸಬ್ ರಿಜಿಸ್ಟರ್ ಕಛೇರಿಗೆ ಹೋಗಿಲ್ಲ ಎಂದರೆ ಸರಿಯಲ್ಲ.

ನಾನು ರೆಮ್ಯುನರೇಷನ್ ತೆಗೆದುಕೊಂಡಿರುವ ಬಗ್ಗೆ ನಮೂದು ಮಾಡಿ ರಶೀದಿಯನ್ನು ಯಾರು ದಾಖಲಾತಿಯನ್ನು ಬರೆಸಿಕೊಂಡಿರುತ್ತಾರೋ ಅವರಿಗೆ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ಕೊಟ್ಟಿಲ್ಲ ನನಗೆ ಸಬ್ ರಿಜಿಸ್ಟರ್ ಕಚೇರಿಯಿಂದ ಯಾವುದೇ ನಿರ್ದೇಶನ ಇಲ್ಲ ಎಂದು ನುಡಿಯುತ್ತಾರೆ. ಡೀಡ್ ರೈಟರ್ ಗಳು ತಾವು ನಿರ್ವಹಣೆ ಮಾಡಿದಂತಹ ರಿಜಿಸ್ಟರ ಗಳನ್ನು ತೋರಿಸಿ ಮತ್ತೆ ಅವುಗಳನ್ನು ರಿನಿವಲ್ ಮಾಡಿಸಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿಯು ಇರಬಹುದು

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ಯಾವುದೇ ವ್ಯವಹಾರ ನಡೆದಿಲ್ಲ ನಾನು ಸುಳ್ಳು ದಾಖಲಾತಿ ಸೃಷ್ಠಿ ಮಾಡಿದ್ದೇನೆ ಮತ್ತು ಸುಳ್ಳು ಸಹಿ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿಃ16.11.2019 ರಲ್ಲಿ ನಾನು ಇದೇ ವ್ಯವಹಾರಕ್ಕೆ ಸಂಬಂಧಿಸಿದಂತೆ 2 ನೇ ಅಡ್ವಾನ್ಸ ಪ್ರಮಾಣ ಪತ್ರವನ್ನು ತಯಾರಿಸಿ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಅದರ ಮೂಲ ದಾಖಲಾತಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಕಾನೂನು ಪ್ರಕಾರ ಯಾವುದೇ ಡೀಡ್ ಗಳನ್ನು ಬರೆದಿದ್ದಲ್ಲಿ ಸದರಿ ಪತ್ರ ಯಾವುದು ಮತ್ತು ಬರೆಸಿಕೊಂಡವರು, ಬರೆದುಕೊಟ್ಟವರ ಮಾಹಿತಿ, ಎಷ್ಟು ಫೀಸ್ ತೆಗೆದುಕೊಳ್ಳಲಾಯಿತು ಎಂದು ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ನೋಡುತ್ತಿರುವ ದಿಃ16.11.2019 ರ ದಾಖಲಾತಿಯು ಜೆರಾಕ್ಸ ಪ್ರತಿಯಾಗಿದ್ದು, ಅದರ ಮೂಲ ಪ್ರತಿಯನ್ನು ನಾನೇ ಸಿದ್ದಪಡಿಸಿದ್ದೇನೆ ಎಂದರೆ ಸಾಕ್ಷಿಯು ಮೂಲ ದಾಖಲಾತಿ ತೋರಿಸಿದ್ದಲ್ಲಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜೆರಾಕ್ಸ ಪ್ರತಿಯನ್ನು ನಾನೇ ಸಿದ್ದಪಡಿಸಿದ ದಾಖಲಾತಿಯಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದರೆ ಸರಿಯಲ್ಲ ಮೂಲ ಪ್ರತಿ ಇದ್ದಲ್ಲಿ ಮಾತ್ರ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜೆರಾಕ್ಸ ಪ್ರತಿಯಲ್ಲಿರುವ ನೋಂದಣಿ ಸಂಖ್ಯೆ ನಂ.3821 ಸಂಖ್ಯೆಯನ್ನು ನೋಡಿ ಅದು ನಾನೇ ಮಾಡಿದಂತಹ ಕ್ರಯದ ಕರಾರು ಪತ್ರವನ್ನು ಗುರುತಿಸಲು ಆಗುತ್ತದೆ ಎಂದು ನುಡಿಯುತ್ತಾರೆ. ಸದರಿ ನೋಂದಣಿ ಸಂಖ್ಯೆಯ ಮೇಲೆ ಬೇರೊಂದು ನೋಂದಣಿ ನಂಬರ ಹಾಕಿ ಅದೇ ರೀತಿ ದಾಖಲಾತಿಯನ್ನು ಸೃಷ್ಠಿಸಿದ್ದಲ್ಲಿ ಅದನ್ನು ಗುರುತಿಸಲು ಆಗುತ್ತದೆ ಎಂದರೆ ಸಾಕ್ಷಿಯು ಅದೇ ಕಾರಣದಿಂದ ಮೂಲ ಪ್ರತಿಯನ್ನು ಕೇಳಿದ್ದು ಎಂದು ನುಡಿಯುತ್ತಾರೆ.

ನಮ್ಮ ಕಚೇರಿಗೆ ಯಾವುದೇ ಪಕ್ಷಕಾರರು ಮತ್ತು ಸಾಕ್ಷಿದಾರರು ಈ ಕ್ರಯದ ಕರಾರು ಸಂಬಂಧಪಟ್ಟಂತೆ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರವನ್ನು

ನೀವು ಮಾಡಿದ್ದೀರಾ ಅಥವಾ ವಕೀಲರು ಸಿದ್ದಪಡಿಸಿದ್ದಾರಾ ಎಂದರೆ ಸಾಕ್ಷಿಯು ವಕೀಲರು ಸಿದ್ದಪಡಿಸಿದ್ದು ಅದನ್ನು ನಾನು ನೋಡಿ ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ಕೇಸಿನ 2 ಮತ್ತು 3 ನೇ ಪ್ರತಿವಾದಿಗಳು ಯಾರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ಸೃಷ್ಠಿ ಮಾಡಿದಕೊಂಡ ದಾಖಲಾತಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.